ಶ್ರೀಮತಿ ಎಸ್. ಪ್ರಮಿಳ.—ಅಧ್ಯಕ್ಷರೇ, ಜಾಯಿಂಟ್ ಡೈರೆಕ್ಟರ್ ಆಫ್ ಲ್ತ್ಹೆ, ಹಾಸ್ಪಿಟಲ್ ನವರಿಗೆ ನೋಟೀಸ್ ಕೊಟ್ಟಿದ್ದಾರೆ. ಇಡೀ ಕರ್ನಾಕಟದಲ್ಲಿ ಹೆಲ್ತ್ ಡಿಪಾರ್ಟ್‌ಮೆಂಟ್ ಏನು ಇದೆ ಅದು ಹದಗೆಟ್ಟಿದೆ ಅವರಿಗೆ ಅನುಮಾನ ಬಂದು ಎಲ್ಲಾ ಬೋರ್ಡ್‌ನಲ್ಲೂ ಎಪಿಡಮಿಕ್ ಡಿಸೀಸ್ ಎಲ್ಲಿ ಬಂದು ಬಿಡುತ್ತದೋ ಅಂತ ಈ ರೀತಿ ನೋಟೀಸ್ ಕೊಟ್ಟಿದ್ದಾರೆಯೇ ್ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಕೇಳಿದ್ದೇನೆ. ನಾನು ಒಂದು ನೀತಿ ಪ್ರಶ್ನೆಯನ್ನು ಹೇಳಿದೆ. ಅವರು ಏನು ಹೇಳಿದರು ಅಂದರೆ ನಿಮಗೆ ರೀ ಕಾನ್‌ಸ್ಟಿಟ್ಯೂಟ್ ಮಾಡುವ ಅಧಿಕಾರ ಇದೆ ಮಾಡಬಹುದು ಅಂತ ಹೇಳಿದರು. ನಾವು ಯಾವ ಬೋರ್ಡ್ ಬೇಕಾದರೂ ರೀ ಕಾನ್‌ಸ್ಟಿಟ್ಯೂಟ್ ಮಾಡಬಹುದು ನಾವು ಏನು ಯೋಚನೆ ಮಾಡಿದೆವು ಅಂದರೆ ನಾವು ಅವರನ್ನು ಹೇಳದೆ ಕೇಳದೆ ರೀ ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕಿಂತ ಅವರೇ ರಾಜಿನಾಮೆ ಕೊಟ್ಟರೆ ಒಳ್ಳೆಯದು ಅಂತ ಮಾಡಿದೆವು. ನಾವು ರಾಜೀನಾಮೆ ಕೇಳದೇ ಹೋಗಿದ್ದರೆ ಏನಾಗುತ್ತಿತ್ತು ಅಂದರೆ ಸರ್ಕಾರದವರು ರಾಜಿನಾಮೆ ಕೇಳಿದ್ದರೆ ನಾವೇ ಕೊಡುತ್ತಿದ್ದೆವು ನಮಗೆ ಹೇಳದೆ ಕೇಳದೆ ರೀ ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ ಅಂತ ಹೇಳುತ್ತಿದ್ದರು. ನಾವು ಗೌರವದಿಂದ ಕೇಳಿದ್ದೇವೆ. ನಮಗೆ ಅಧಿಕಾರ ಇದೆ ನಾವು ಮಾಡುತ್ತೇವೆ. ಈಗ ಒಳ್ಳೆಯ ಉದ್ದೇಶದಿಂದ ಕೇಳಿದ್ದೇವೆ. With regard to the Hospital Visitors' Board wherein social organisations are involved, Government will definitely look into the suggestions madeby Sri Bommai. ಇನ್ನು ಮಾನ್ಯ ದೇವೇಗೌಡರು ಏನು ಹೇಳಿದ್ದಾರೆ, ಆ ಉದ್ದೇಶ ಸರ್ಕಾರಕ್ಕೆ ಇಲ್ಲ. ಬೋರ್ಡ್‌ನಲ್ಲಿ ಇರುವವರನ್ನು ತೆಗೆದು ಹೊಸ ಬೋರ್ಡ್ ಮಾಡುವ ಉದ್ದೇಶ ಇದೆ. ಈಗ ಏನು ಹೇಳಿದ್ದಾರೆ ಅದನ್ನು ನೋಡಿ ಅವರಿಗೆ ಸ್ಪಷ್ಟವಾದ ಉತ್ತರ ಕೊಡುತ್ತೇನೆ.

Demands for Grants for 1971-72 and 1972-73.

Presentation of Statement--Expenditure incurred in excess of voted grants

SRI VEERAPPA MOILLY (Minister for Finance and Planning)—Sir, I beg to present—

(i) a statement showing the Demands for Grants to cover expenditure incurred in Excess of Voted Grants and charged Appropriations during 1971-72;
as required by article 205 (i) (b) of the Constitution of India.

(ii) a statement showing the Demands for Grants to cover expenditure incurred in Excess of Voted Grants and charged Appropriation during 1972-73;
as required by article 205 (i) (b) of the Constitution of India.

MR. SPEAKER.—The statements are presented.

Re.-Strike of workers of the Bagalkot Cement Industry.

† ಶ್ರೀ ಪಿ. ಎಂ ಇಬ್ರಾಹಿಂ. (ಕಾರ್ಮಿಕ ಮಂತ್ರಿಗಳು).—ದಿನಾಂಕ ೨೮-೨-೧೯೮೦ ರಂದು, ಮಾನ್ಯ ಸದಸ್ಯರಾದ ಶ್ರೀ ಸಯನೇಕ್, ಎಂ.ಎಲ್.ಎ. ಅವರು ಮಂಡಿಸಿದ್ದ ಗಮನ ಸೆಳೆಯುವ ಸೂಚನೆಯ ಮೂಲಕ ಬಾಗಲಕೋಟೆ ಉದ್ಯೋಗ ಕಂಪನಿಯ ಕೆಲಸಗಾರರ ಮುಷ್ಕರದ ಬಗ್ಗೆ ನಾನು ಒಂದು ಹೇಳಿಕೆಯನ್ನು ಈ ಸದನದಲ್ಲಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಮೇಲ್ಕಂಡ ಹೇಳಿಕೆಯನ್ನು ಮಂಡಿಸಿದಾಗ ಅನೇಕ ಸದಸ್ಯರುಗಳು ಕಳವಳ ವ್ಯಕ್ತ ಮಾಡಿ ಮುಷ್ಕರವನ್ನು ನಿಲ್ಲಿಸಲು ಸೂಕ್ತ ಕ್ರಮವನ್ನು ಸರ್ಕಾರವು ಕೈಗೊಳ್ಳುವಂತೆ ಒತ್ತಾಯ ಮಾಡಿದ್ದರು. ಅದರಂತೆ ಮಾಲೀಕರು ಮತ್ತು ಕೆಲಸಗಾರರನ್ನು ಸಂದರ್ಶಿಸಿ ಸಮಸ್ಯೆಯನ್ನು ಬಗೆಹರಿಸಲು ಸರ್ವ ಪ್ರಯತ್ನ ಮಾಡುತ್ತೇನೆ ಎಂಬ ಭರವಸೆಯನ್ನು ಈ ಸದನಕ್ಕೆ ಕೊಟ್ಟಿದ್ದೆನು.

ಈ ಮೇಲ್ಕಂಡ ಭರವಸೆಯ ಪ್ರಕಾರ, ತಾರೀಖು ೬-೩-೧೯೮೦ರ ಸಂಜೆ ೬ ಘಂಟೆಗೆ, ಬಾಗಲ ಕೋಟೆ ಉದ್ಯೋಗ ಕಂಪನಿಯ ಮಾಲೀಕರು ಮತ್ತು ಕೆಲಸಗಾರರ ಪ್ರತಿನಿಧಿಗಳನ್ನು ನನ್ನ ಚೇಂಬರ್ಸ್ ನಲ್ಲಿ ಸಂದರ್ಶಿಸಿ ಸಂಧಾನಗಳನ್ನು ನಡೆಸಲಾಯಿತು. ಈ ಸಂಧಾನಗಳ ಫಲವಾಗಿ ಎರಡು ಕಡೆಯ ಪ್ರತಿನಿಧಿಗಳು ಬೇಡಿಕೆಗಳ ಪಟ್ಟಿಯ ಬಗ್ಗೆ ಒಂದು ನಿರ್ದಿಷ್ಟ ಒಪ್ಪಂದಕ್ಕೆ ಬಂದು ಸಹಿ ಹಾಕಿರುತ್ತಾರೆ. ಈ ಒಪ್ಪಂದದ ಪ್ರಕಾರ ೨೪-೧-೧೯೮೦ರಿಂದ ನಡೆದಿದ್ದ ಮುಷ್ಕರವು ಅಂತ್ಯಗೊಂಡು ಕೆಲಸಗಾರರು ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ದಿನಾಂಕ ೮-೩-೧೯೮೦ ಶನಿವಾರದಂದು ಬೆಳಿಗ್ಗೆ ೮ ಘಂಟೆಗೆ ಹಾಜರಾಗುತ್ತಾರೆ ಎಂಬುದನ್ನು ತಿಳಿಸಲು ಹರ್ಷಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂಥ ಸಯನಕ್ ಅವರು ಈ ಸದನದಲ್ಲಿ ಏನೊಂದು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದರು ಅದರ ಬಗ್ಗೆ ಬಹಳ ಸಂತೋಷದಿಂದ ಇವೊತ್ತು ಹೇಳಬೇಕಾಗಿದೆ. ಈ ಹೊಸ ಸರ್ಕಾರ ಬಂದಮೇಲೆ ೪೨ ದಿವಸಗಳಿಂದ ಮುಚ್ಚಿದ್ದಂಥಹ ಈ ಕಂಪನಿಯನ್ನು ಇವೊತ್ತು ಮತ್ತೆ ಪುನಃ ತೆರೆಸಿದ್ದೇವೆ. ಈ ಎರಡು ಸಂಧಾನಗಳನ್ನು ಯಶಸ್ವಿಯಾಗಿ ನಡೆಸಿದ್ದೇವೆ ಅಂತ ಈ ಸದನಕ್ಕೆ ಸಂತೋಷದಿಂದ ತಿಳಿಸಲಿಕ್ಕೆ ಇಚ್ಛಿಸುತ್ತೇನೆ.

(Sri M. C. BASAPPA in the Chair)

Death of Sadhu under Police Custody

SRI A. LAKSHMISAGAR.—Sir yesterday the Speaker said that the matter raised by me under rule 50.....

CHAIRMAN.—That is not on the agenda. The next subject is discussion on the Motion of Thanks to the Governor's Address.

SRI A. LAKSHMISAGAR.—There are so many matters which are not mentioned in the agenda. Nevertheless, they are taken up if there is a previous commitment on the part of the Chair to take up those matters. That the matter raised is serious enough, is admitted by one and all.

CHAIRMAN.—I would like to follow the agenda.

SRI B. B. SAYANAK.—Why the Chair is taking objection to take up this issue ?

CHAIRMAN.—I am not taking any objection. I am following the agenda.

SRI B. B. SAYANAK.—I agree that you are following agenda but when the Speaker has assured yesterday, you must allow Sri Laxmisagar to speak on this most important subject.

ಶ್ರೀ ಹೆಚ್. ಡಿ. ದೇವೇಗೌಡ.—ಈ ದಿವಸ ರೂಲಿಂಗ್ ಕೊಡಬೇಡಿ ಎಂದು ನಾವು ಮಾನ್ಯ ಸಭಾಧ್ಯಕ್ಷರನ್ನು ಪಾರ್ಥಿಸಿಕೊಂಡಿದ್ದರ ಮೇರೆಗೆ ಅವರು ನಮ್ಮ ಮನವಿಯನ್ನು ಮಾನ್ಯತೆ ಮಾಡಿದ್ದಾರೆ. ಆದರೆ ಅಧ್ಯಕ್ಷರೇ ಹೀಗೆ ಹೇಳಿದ್ದಾರೆಂದು ನಾವು ಹೇಳುವುದು ಸರಿಯಲ್ಲ. ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳದೇ ಹೋದರೆ, ಸಭಾಧ್ಯಕ್ಷರು ಆಳುವ ಪಕ್ಷದವರ ಕೋಪಕ್ಕೆ ತುತ್ತಾಗಬಹುದೆಂದು